ಉಪಾಧ್ಯಕ್ಷರು : ಮಾನ್ಯ ರಾಮದಾಸ್‌ರವರೇ, ತಮ್ಮ ಪ್ರಶ್ನೆ ಸಂಖ್ಯೆ : 152 (977) ಕ್ಕೆ ಮಾನ್ಯ ಆರೋಗ್ಯ ಮಂತ್ರಿಗಳು ಸಮಯವನ್ನು ಕೇಳಿದ್ದಾರೆ.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿರುವಂತಹ ಪ್ರಶ್ನೆಗೆ ಯಾವುದೋ ಜಿಲ್ಲೆಯಿಂದ ಉತ್ತರ ಬರುವಂಥಾದ್ದು ಅಲ್ಲ, ಇಲ್ಲೇ ಮಲ್ಟಿಸ್ಟೋರ್ ಬಿಲ್ಡಿಂಗ್‌ನಿಂದ ವಿಧಾನಸೌಧಕ್ಕೆ ಉತ್ತರ ಬರುವಂಥಾದ್ದು. ನನ್ನ ಪ್ರಶ್ನೆ ಕಳೆದ ಮೂರು ಸಾಲಿನ ಆಯವ್ಯಯದಲ್ಲಿ ಆರೋಗ್ಯ ಇಲಾಖೆಗೆ ಕೊಟ್ಟಿರುವಂತಹ ಹಣವೆಷ್ಟು? ಖರ್ಚು ಎಷ್ಟು ಆಗಿದೆ? ಪ್ರಸಕ್ತ ಸಾಲಿನಲ್ಲಿ ಕೊಟ್ಟಿರುವಂತಹ ಹಣ ಉಪಯೋಗ ಮಾಡಿದ್ದಿರಾ, ಎಂಬುದು ನನ್ನ ಪ್ರಶ್ನೆಯಾಗಿದೆ. ಇದಕ್ಕೆ ಉತ್ತರವನ್ನು ಮಲ್ಟಿ ಸ್ಟೋರ್ ಬಿಲ್ಡಿಂಗ್‌ನಲ್ಲಿರುವಂತಹ ಇಲಾಖೆಯಿಂದ ಉತ್ತರವನ್ನು ತರಿಸುವಂಥಾದ್ದು, ಅಲ್ಲಿಂದ ಇಲ್ಲಿಗೆ ಉತ್ತರ ಬರಬೇಕಾದರೆ ಎಷ್ಟು ದಿವಸ ಬೇಕಾಗುತ್ತದೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಸಮಯ ಕೇಳಿದ್ದಾರೆ.

ಡಾ|| ಹೆಚ್.ಸಿ. ಮಹದೇವಪ್ಪ : ಮಾನ್ಯ ಉಪಾಧ್ಯಕ್ಷರೆ, ಇದರ ಡಿಟೇಲ್ ತಯಾರು ಮಾಡಿ ಉತ್ತರವನ್ನು ಕೊಡಬೇಕು, ಆದುದರಿಂದ ಡಿಟೇಲ್‌ಅನ್ನು ತರಿಸಿ ಕೊಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಇನ್ನು ಒಂದು ವಾರದಲ್ಲಿ ಉತ್ತರವನ್ನು ಇಲಾಖೆಯಿಂದ ತರಿಸಿಕೊಂಡು ಕೊಡುತ್ತಾರೆ.

ಶ್ರೀ ಎ. ರಾಮದಾಸ್ : ಎರಡು ಬಾರಿಯೂ ಈ ರೀತಿಯೇ ಆಗಿದೆ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಎರಡು ವಾರಗಳಲ್ಲಿ ಉತ್ತರ ಕೊಡುತ್ತಾರೆ.

ವಿಟ್ಲದಲ್ಲಿನ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ನಿರ್ಮಾಣ

153 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಟ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಇಲ್ಲದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಕಟ್ಟಡ ಕಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ವಿಟ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡಕ್ಕಾಗಿ 78.00 ಲಕ್ಷ ರೂ.ಗಳ ಅಂದಾಜು ಮತ್ತು ನಕ್ಷೆಯನ್ನು ಲೋಕೋಪಯೋಗಿ ಇಲಾಖೆಯಿಂದ ಪಡೆಯಲಾಗಿದ್ದು, ಆಡಳಿತಾತ್ಮಕ ಅನುಮೋದನೆ ನೀಡುವ ವಿಷಯದಲ್ಲಿ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಉಪಾಧ್ಯಕ್ಷರೇ, ವಿಟ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡಕ್ಕೆ ಹಣವನ್ನು ಒದಗಿಸುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಲೋಕೋಪಯೋಗಿ ಇಲಾಖೆಯಿಂದ 78 ಲಕ್ಷ ರೂಪಾಯಿಗಳು ಆಗುವುದು. ಅದರ ಪರಿಶೀಲನೆಯಲ್ಲಿದೆ ಎಂದು ಹೇಳುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ಒಂದೇ ಪ್ರಥಮ ದರ್ಜೆಯ ಕಾಲೇಜು ಇರುವಂಥಾದ್ದು, ಸುಮಾರು 17 ಹೈಸ್ಕೂಲ್‌ಗಳು, 8 ಪದವಿ ಪೂರ್ವ ಕಾಲೇಜು ಇದೆ. ಇವತ್ತಿನವರೆಗೂ ಅಲ್ಲಿರುವಂತಹ ಒಂದು ಪ್ರಥಮ ದರ್ಜೆಯ ಕಾಲೇಜು ಕಟ್ಟಡಕ್ಕೆ ಹಣ ಒದಗಿಸಿಲ್ಲ. ನಾವು ಅದಕ್ಕೆ ಬೇಕಾದಂತಹ ಜಮೀನನ್ನು ಕಾದಿರಿಸಿದ್ದೇವೆ. ಅಲ್ಲಿ ಜನರು ತುಂಬಾ ಗಲಾಟೆ ಮಾಡುತ್ತಿದ್ದಾರೆ, ನಾನು ಶಾಸಕನಾಗಿ ಅಲ್ಲಿಗೆ ಹೋಗುವಂತಹ ಪರಿಸ್ಥಿತಿ ಇಲ್ಲ. ಆದುದರಿಂದ ಈ ವರ್ಷ ಅದಕ್ಕೆ ಹಣವನ್ನು ಒದಗಿಸುವಂತೆ ಮಾನ್ಯ ಸಚಿವರನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸ್ನೇಹಿತರು ಹೇಳುವಂಥಾದ್ದು ನಿಜವಾಗಿದೆ. ನಾವು ಕಾಲೇಜುಗಳನ್ನು ಕೊಡಬೇಕಾದರೆ ಯೋಚನೆಯನ್ನು ಮಾಡಲಿಲ್ಲ, ಶಾಸಕರು, ಜನರು ಅವಶ್ಯಕತೆ ಇದೆ ಎಂದು ಹೇಳಿದರು, ಅದೇ ರೀತಿಯಲ್ಲಿ ನಾವೂ ಸಹ ಹಣವನ್ನು ಸ್ಯಾಂಕ್ಷನ್ ಮಾಡಿಕೊಂಡು ಬಂದಿದ್ದೇವೆ. ಆದರೆ ಕಳೆದ ವರ್ಷ ಅಂದರೆ 1997-98ರ ಬಜೆಟ್‌ನಲ್ಲಿ 50 ಲಕ್ಷ ರೂಪಾಯಿಗಳು ಕಾಲೇಜುಗಳ ಕಟ್ಟಡಗಳಿಗೋಸ್ಕರ ಇಟ್ಟಿದ್ದರು. ಆದರೆ ಒಂದೊಂದು ಕಾಲೇಜಿಗೂ 78 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಆಗಿದೆ. 40-45 ಕಾಲೇಜುಗಳಲ್ಲಿ ಸ್ಪಿಲ್ಟ್‌ಓವರ್ ಆಗಿದೆ. ಈ ವರ್ಷ 50 ಲಕ್ಷ ರೂಪಾಯಿಗಳನ್ನು ಕೊಟ್ಟರೆ ಸಾಕಾಗುವುದಿಲ್ಲವೆಂದು ಒತ್ತಾಯ ಮಾಡಿದ್ದು, ಈ ವರ್ಷ ಮೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಮ್ಮ ಮಾನ್ಯ ಸ್ನೇಹಿತರ ಕ್ಷೇತ್ರಕ್ಕೂ ಈ ವರ್ಷ ಬಜೆಟ್‌ನಲ್ಲಿ 8ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೇವೆ. ಆದರೆ ನನಗೆ ಏನು ಅನಿಸುತ್ತಿದೆ ಎಂದರೆ 78 ಲಕ್ಷ ರೂಪಾಯಿಗಳ ಅಂದಾಜು ಅವಶ್ಯಕತೆ ಇದೆಯೇ? ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ 1, 2, 3 ಎಂದು ಮಾಡುತ್ತಾರೆ, ಅದು 1 ಲಕ್ಷ, 85 ಲಕ್ಷ 75 ಲಕ್ಷ ರೂಪಾಯಿಗಳು ಎಂದು ಮಾಡುತ್ತಾರೆ. ಅದರ ಅವಶ್ಯಕತೆ ಇಲ್ಲ, ಅದಕ್ಕೋಸ್ಕರ ಪಿ.ಡಬ್ಲ್ಯೂ.ಡಿ. ಮಂತ್ರಿಯವರನ್ನು ಮತ್ತು ಕಾರ್ಯದರ್ಶಿಯವರನ್ನು ಕರೆಯಿಸಿ ಈ ಅಂದಾಜನ್ನು ಕಡಿಮೆ ಮಾಡಿಸೋಣವೆಂದು ಇದ್ದೇನೆ. ಇದು 30 ಲಕ್ಷ, 40 ಲಕ್ಷ ರೂಪಾಯಿಗಳಿಗೆ ಫಸ್ಟ್ ಫ್ಲೋರ್ ಅವಶ್ಯಕತೆ ಇರುವಂತಹ ಕಟ್ಟಡವೇನು ಬೇಕೋ ಅವುಗಳಿಗೆ ಹಣವನ್ನು ಕೊಟ್ಟು ಅದಷ್ಟು ಜಾಗ್ರತೆ ಕಟ್ಟಡವನ್ನು ಕಟ್ಟುವುದಕ್ಕೆ ಇಲ್ಲಿ 78 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿ 10 ಸಾವಿರ ರೂಪಾಯಿಗಳು ಬಜೆಟ್‌ನಲ್ಲಿಟ್ಟರೆ ಕೆಲಸವಾಗುವುದಿಲ್ಲ. ಆದುದರಿಂದ ಈ 78 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಅನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ ಈ ವರ್ಷ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎಂ.ರುಕ್ಮಯ್ಯ ಪೂಜಾರಿ : ಮಾನ್ಯ ಉಪಾಧ್ಯಕ್ಷರೇ, ಈ ಕೆಲಸವನ್ನು ಪ್ರಾರಂಭ ಮಾಡಬೇಕಾದರೆ ಮೂರನೇ ಒಂದು ಭಾಗ ಹಣವನ್ನು ಸರ್ಕಾರ ಒದಗಿಸಬೇಕು. ಇಲ್ಲಿ 78 ಲಕ್ಷ ರೂಪಾಯಿಗಳ ಅಂದಾಜು ಮಾಡಿದ್ದು ನೀವು ಕೊಟ್ಟಿರುವಂಥಾದ್ದು ಎಂಟು ಲಕ್ಷ ರೂಪಾಯಿಗಳು

ಆಗಿದೆ. ಇದರಿಂದ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಅದಕ್ಕೆ ನಾನು ಹೇಳುವುದೇನೆಂದರೆ ನೀವು ಮೂರನೇ ಒಂದು ಭಾಗ ಹಣವನ್ನು ಒದಗಿಸಿ, ಸರ್ಕಾರದವರು ಕಾಲೇಜಿಗೆ ಮಂಜೂರಾತಿಯನ್ನು ಕೊಟ್ಟಮೇಲೆ ಅದಕ್ಕೆ ಹಣವನ್ನು ಒದಗಿಸುವಂಥಾದ್ದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ನೀವು ಹಿಂದೆ ಮಂಜೂರಾತಿಯನ್ನು ಕೊಟ್ಟಿರುವಂಥಾದ್ದು ಎಂದು ಸುಮ್ಮನೆ ಕುಳಿತುಕೊಂಡರೆ ಆಗುವುದಿಲ್ಲ. ಆದುದರಿಂದ ನಾನು ತಮ್ಮನ್ನು ಒತ್ತಾಯ ಮಾಡುವುದೇನೆಂದರೆ 1998-99ರಲ್ಲಿ ಮೂರನೇ ಒಂದು ಭಾಗ ಹಣವನ್ನು ಒದಗಿಸಬೇಕು ಇಲ್ಲದಿದ್ದರೆ ನಾವು ನಮ್ಮ ಕ್ಷೇತ್ರಕ್ಕೆ ಹೋಗುವುದಕ್ಕಾಗುವುದಿಲ್ಲ. ಇಲ್ಲಿ ಕಾಲೇಜು ಪ್ರಾರಂಭ ಮಾಡಿ ಐದು ವರ್ಷಗಳಾಯಿತು. ತಾವು ಒಳ್ಳೆಯ ಮಂತ್ರಿಗಳಾಗಿದ್ದೀರಿ, ನನಗೆ ತಮ್ಮ ಮೇಲೆ ವಿಶ್ವಾಸವಿದೆ. ತಾವು ಇದೇ ವರ್ಷ ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವಂಥಾದ್ದು ನಿಜ, ಆದರೆ ಹಣ ಎಷ್ಟು ಬೇಕಾದರೂ ಬರುತ್ತಾ ಇದ್ದರೆ ಒದಗಿಸಬಹುದು. ನಮಗೆ ಬರುವ ಹಣವನ್ನು ಇತಿಮಿತಿಯಲ್ಲಿ ಖರ್ಚು ಮಾಡಬೇಕಾಗುತ್ತದೆ. ತಾವು ಹೇಳುವಂಥಾದ್ದನ್ನು ನಾನು ಒಪ್ಪುತ್ತೇನೆ, 78 ಲಕ್ಷ ರೂಪಾಯಿಗಳ ಅಂದಾಜಿನ ಅವಶ್ಯಕತೆ ಇಲ್ಲವೆಂದು ನಾನು ತೀರ್ಮಾನ ಮಾಡಿದ್ದೇನೆ. ಆದುದರಿಂದ ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಗಳನ್ನು ಮತ್ತು ಕಾರ್ಯದರ್ಶಿಯವರನ್ನು ಕರೆಯಿಸಿ ಇದನ್ನು 30 ಲಕ್ಷ ರೂಪಾಯಿಗಳಿಗೆ ಕಡಿಮೆ ಮಾಡಿ ಮೂರನೆ ಒಂದು ಭಾಗ ಹಣವನ್ನು ಅಂದರೆ 10 ಲಕ್ಷ ರೂಪಾಯಿಗಳನ್ನು ಯಾವ ರೀತಿಯಲ್ಲಿ ಒದಗಿಸಬೇಕೆಂದು ನಾನು ಯೋಚನೆ ಮಾಡುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ವರ್ಷ ತಾವು 10 ಲಕ್ಷ ರೂಪಾಯಿಗಳನ್ನು ಕೊಡಬೇಕು, ಇಲ್ಲದಿದ್ದರೆ ನಾನು ಧರಣಿ ಮಾಡಬೇಕಾಗುತ್ತದೆ, ಏಕೆಂದರೆ ನಾನು ನನ್ನ ಕ್ಷೇತ್ರಕ್ಕೆ ಹೋಗುವುದಕ್ಕಾಗುವುದಿಲ್ಲ. ನಾನು ನನ್ನ ಕ್ಷೇತ್ರಕ್ಕೆ ಹೋದರೆ ಜನರು ನನ್ನನ್ನು ಗೇರಾವ್ ಮಾಡುತ್ತಿದ್ದಾರೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಉಪಾಧ್ಯಕ್ಷರೇ, ನಾನು ಇಷ್ಟು ಭರವಸೆ ಕೊಡುತ್ತೇನೆ, ಈಗ 78 ಲಕ್ಷ ರೂಪಾಯಿಗಳ ಅಂದಾಜು ಏನು ಇದೆ, ಅಷ್ಟನ್ನು ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ನಾನು ಪಿ.ಡಬ್ಲ್ಯೂ.ಡಿ. ಮಿನಿಸ್ಟರ್‌ರವನ್ನು ಮತ್ತು ಕಾರ್ಯದರ್ಶಿಯವರನ್ನು ಕರೆಯಿಸಿ ಅವರ ಜೊತೆಯಲ್ಲಿ ಮಾತನಾಡಿ ಎಷ್ಟು ರೂಮುಗಳ ಅವಶ್ಯಕತೆ ಇದೆ ಅಷ್ಟನ್ನು ಮಾಡಿಸುತ್ತೇವೆ. ನಾವು ಒಂದೊಂದು ಕಾಲೇಜಿಗೆ 78 ಲಕ್ಷ, 80 ಲಕ್ಷ ರೂಪಾಯಿಗಳನ್ನು ಕೊಟ್ಟರೆ ನಮಗೆ ಬಜೆಟ್‌ನಲ್ಲಿ ಒದಗಿಸಿರುವಂತಹ ಮೂರು ಕೋಟಿ ರೂಪಾಯಿಗಳಲ್ಲಿ ನಾಲ್ಕು ಕಟ್ಟಡಗಳನ್ನು ಕಟ್ಟುವುದಕ್ಕಾಗುವುದಿಲ್ಲ. ಇದು ಇವತ್ತಿನ ಪ್ರಶ್ನೆಯಲ್ಲ, ಇದು 4-5 ವರ್ಷಗಳಿಂದ ಇರುವಂಥಾದ್ದು ಆಗಿದೆ. ಅದು ಎಷ್ಟೇ ಇರಲಿ, ಮಾಡುವಂಥಾದ್ದು ನಮ್ಮ ಜವಾಬ್ದಾರಿಯಾಗಿರುತ್ತದೆ. ಇದನ್ನು ನಾವು ಮಾಡಬೇಕಾದಂತಹ ಕರ್ತವ್ಯವಾಗಿರುತ್ತದೆ, ನಾವು ಮಾಡಬೇಕಾಗುತ್ತದೆ. ಆದುದರಿಂದ ಎಸ್ಟಿಮೇಟ್ ಕಡಿಮೆ ಮಾಡಿ ಮೂರನೇ ಒಂದು ಭಾಗ ಹಣವನ್ನು ಒದಗಿಸಿ ಕೆಲಸವನ್ನು ಮಾಡುವುದಕ್ಕೆ ಯೋಜನೆ ಮಾಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳಿಗೆ ನನ್ನದೊಂದು ಸಲಹೆ ಏನೆಂದರೆ ಈಗ ಕರ್ನಾಟಕ ರಾಜ್ಯದಲ್ಲಿ ಅನೇಕ ವರ್ಷಗಳಿಂದ ಈ ರೀತಿ ಆಗಿದೆ. ತಾವು ಹೊಸದಾಗಿ ಕಾಲೇಜುಗಳನ್ನು ತೆರೆಯಬೇಡಿ, ಏಕೆಂದರೆ ಇರುವಂತಹ ಕಾಲೇಜುಗಳಿಗೆ ಕಟ್ಟಡವನ್ನು ಒದಗಿಸುವುದಕ್ಕೆ ಮೂರನೇ ಒಂದು ಭಾಗ ಗ್ರಾಂಟ್ ಕೊಡುವುದಕ್ಕಾಗುವುದಿಲ್ಲ. ನನ್ನ ಕ್ಷೇತ್ರದಲ್ಲಿ 1991ರಲ್ಲಿ ದೇವಸ್ಥಾನದಲ್ಲಿ ಕಾಲೇಜು ಪ್ರಾರಂಭ ಮಾಡಿದ್ದೇವೆ. ಇದನ್ನು ನಾನು ತಮ್ಮ ಗಮನಕ್ಕೂ ತಂದಿದ್ದೇನೆ ಮತ್ತು ಪಿ.ಡಬ್ಲ್ಯೂ.ಡಿ. ಮಂತ್ರಿಗಳ ಗಮನಕ್ಕೂ ತಂದಿದ್ದೇನೆ.

ಉಪಾಧ್ಯಕ್ಷರು : ತಾವು ಈ ವಿಷಯವನ್ನು ಬಜೆಟ್‌ಮೇಲೆ ಮಾತನಾಡುವಾಗ ಹೇಳಿ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಉಪಾಧ್ಯಕ್ಷರೇ, ಇದೇ ರೀತಿ ಬಜೆಟ್‌ನಲ್ಲಿ ಮೂರನೇ ಒಂದು ಭಾಗ ಹಣವಿಲ್ಲದೆ ಲ್ಯಾಪ್ಸ್ ಆಗುತ್ತದೆ. ತಾವು ಅನೇಕ ಬಾರಿ ಮಾಡುತ್ತೇವೆಂದು ಉತ್ತರ ಕೊಡುತ್ತೀರಿ. ಐದು ವರ್ಷಗಳಾದರೂ ಇದು ಆಗಲಿಲ್ಲ, ನಮ್ಮ ಅನೇಕ ಮಾನ್ಯ ಸದಸ್ಯರುಗಳು ಕೇಳುತ್ತಿದ್ದಾರೆ. ಅದಕ್ಕೋಸ್ಕರ ನನ್ನ ಸಲಹೆ ಏನೆಂದರೆ ಹೊಸದಾಗಿ ಕಾಲೇಜುಗಳನ್ನು ಮಂಜೂರು ಮಾಡದೇ ಇರುವ ಕಾಲೇಜುಗಳಿಗೆ ಕಟ್ಟಡವನ್ನು ಒದಗಿಸುತ್ತೀರೋ?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಸದಸ್ಯರು ಉತ್ತಮವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ. ನಾವು ಪ್ರಥಮ ಕಾಲೇಜುಗಳಿಗೆ ಈ ವರ್ಷ ಮಂಜೂರಾತಿಯನ್ನು ಕೊಡಬಾರದೆಂದು ತೀರ್ಮಾನ ಮಾಡಿದ್ದೇವೆ. ನಾವು ಕಾಲೇಜುಗಳನ್ನು ಕೊಡುವುದು 20,000 ಬಜೆಟ್ ಇರುವುದು, 78 ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡುವುದು, ಇದು ಒಂದು ರೀತಿಯಲ್ಲಿ ಮನಸ್ಸಿಗೆ ತೃಪ್ತಿಯಾಗದೇ ಇರುವಂತಹ ಕೆಲಸವಾಗುತ್ತದೆ. ಆದುದರಿಂದ ನಿಮ್ಮ ಅಭಿಪ್ರಾಯವೇನು ಇದೆ ಅದಕ್ಕೆ ನಾವು ಖಂಡಿತವಾಗಿ ಸರ್ಕಾರದ ವತಿಯಿಂದ ಪ್ರಥಮ ದರ್ಜೆಯ ಕಾಲೇಜನ್ನು ಕೊಡುವುದಕ್ಕೆ ಮುಂದೆ ಬರುತ್ತಾ ಇಲ್ಲ. ಮಾನ್ಯ ಸದಸ್ಯರು ತಮ್ಮ ಕ್ಷೇತ್ರದ ಕಾಲೇಜಿನ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ರಾಜ್ಯದಾದ್ಯಂತ ಪ್ರಥಮ ದರ್ಜೆಯ ಕಾಲೇಜುಗಳ ಕಟ್ಟಡದ ಎಸ್ಟಿಮೇಟ್ ಆಗಿದೆ. ಅವುಗಳಿಗೆ ಎಷ್ಟೆಷ್ಟು ಎಷ್ಟಿಮೇಟ್ ಆಗಿದೆ ಅವುಗಳನ್ನು ಪರಿಶೀಲನೆ ಮಾಡಿ 70-80 ಲಕ್ಷ ರೂಪಾಯಿಗಳಿರುವುದನ್ನು ಕಡಿಮೆ ಮಾಡಿ 25-30 ಲಕ್ಷ ರೂಪಾಯಿಗಳ ಒಳಗೆ ಎಸ್ಟಿಮೇಟ್ ಮಾಡಿ ಅಷ್ಟಕ್ಕೆ ಅಮೌಂಟ್ ಕೊಟ್ಟು ಈಗ ಉಳಿದಿರುವಂತಹ ಕೆಲಸವನ್ನು ಸಂಪೂರ್ಣ ಮಾಡುವಂತಹ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಬಣಕಾರ್‌ರವರೆ, ತಮ್ಮ ಪ್ರಶ್ನೆ ಸಂಖ್ಯೆ : 154 (930)ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಸಮಯವನ್ನು ಕೇಳಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು, ರಾಜ್ಯದ ಪ್ರತ್ಯೇಕ ವಿವರಗಳನ್ನು ಕೇಳಿರುವುದರಿಂದ ಸಮಯ ತೆಗೆದುಕೊಂಡು ಉತ್ತರವನ್ನು ಕೊಡುತ್ತೇವೆ.